UASB Library
Newspaper Clippings
18.07.2023 TUESDAY Pg .1
Jai Kisan

Vishwavani Pg.10

ಹವಾಮಾನ ವೈಪರಿತ್ಯ ನಿಯಂತ್ರಣಕ್ಕೆ ಗಮನ ಅಗತ್ಯ

ಬೆಂಗಳೂರು: ಮುಂಬರುವ ದಿನಗಳಲ್ಲಿ ಹವಾಮಾನ ವೈಪರಿತ್ಯ, ಗ್ರಾಮೀಣ- ನಗರ ಪ್ರದೇಶದ ವಲಸೆ ಮತ್ತು ಡಿಜಿಟಲ್ ಅಸಮಾನತೆಯಂತಹ ಸಮಸ್ಯೆಗಳನ್ನು ಬಗೆಹರಿಸುವತ್ತ ನಬಾರ್ಡ್ ಗಮನಹರಿಸಬೇಕು ಎಂದು ಸರಕಾರದ ಅಪರ ಮುಖ್ಯಕಾರ್ಯ ದರ್ಶಿ ಮತ್ತು ಅಭಿವೃದ್ಧಿ ಆಯುಕ್ತ ಡಾ. ಇ.ವಿ.ರಮಣ ರೆಡ್ಡಿ ಹೇಳಿದ್ದಾರೆ.

ನಬಾರ್ಡ್ ಸಂಸ್ಥೆಯ 42ನೇ ಸಂಸ್ಥಾಪನಾ ದಿನದ ಹಿನ್ನೆಲೆಯಲ್ಲಿ ಸಿರಿಧಾನ್ಯ ವಲಯದಲ್ಲಿ ಉತ್ತಮ ಸೇವೆ ಸಲ್ಲಿಸಿದ ಮೂರು ರೈತ ಉತ್ಪಾದಕ ಸಂಸ್ಥೆಗಳು ಮತ್ತು ಮೂವರು ರೈತರನ್ನು ಸನ್ಮಾನಿಸಿ ಮಾತನಾಡಿ, ಅಂತಾರಾಷ್ಟ್ರೀಯ ಸಿರಿಧಾನ್ಯ ವರ್ಷವಾಗಿರುವ ಈ ಸಂದರ್ಭದಲ್ಲಿ ನಬಾರ್ಡ್ ಸಿರಿಧಾನ್ಯಗಳಿಗೆ ಹೆಚ್ಚಿನ ಒತ್ತು ನೀಡಿದೆ. ಇದನ್ನು ಮುಖ್ಯ ಆಹಾರವಾಗಿ ಪರಿವರ್ತಿಸಲು ಸರಕಾರದ ಕ್ರಮಗಳಿಗೆ ನಬಾರ್ಡ್ ನೆರವು ನೀಡುತ್ತಿದೆ. ಇದಕ್ಕಾಗಿ 38 ರೈತ ಉತ್ಪಾದನಾ ಸಂಸ್ಥೆಗಳನ್ನು ಸ್ಥಾಪಿಸಲಾಗಿದ್ದು, ಈ ಮೂಲಕ ಆಹಾರ ಭದ್ರತೆ, ಸುಸ್ಥಿರ ಅಭಿವೃದ್ಧಿಗೆ ನಾಂದಿ ಹಾಡಿದೆ ಎಂದರು. ನಬಾರ್ಡ್ ಪ್ರಧಾನ ವ್ಯವಸ್ಥಾಪಕ ಟಿ.ರಮೇಶ್ ಮಾತನಾಡಿ, ಕಳೆದ ಮೂರು ವರ್ಷಗಳಲ್ಲಿ 35 ಸಾವಿರ ಪ್ರಾಥಮಿಕ ಕೃಷಿಪತ್ತಿನ ಸಹಕಾರಿ ಸಂಘಗಳನ್ನು ಬಹು ಸೇವಾ ಕೇಂದ್ರಗಳನ್ನಾಗಿ ಪರಿವರ್ತಿಸಲಾಗಿದೆ. 5491 ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಗಣಕೀಕರಣ ಮಾಡಲು ಗುರುತಿಸಲಾಗಿದೆ ಎಂದು ಮಾಹಿತಿ ನೀಡಿದರು.



ನಬಾರ್ಡ್ ಸಂಸ್ಥೆಯ 42ನೇ ಸಂಸ್ಥಾಪನಾ ದಿನಾಚರಣೆಗೆ ಆಯುಕ್ತ ಡಾ. ಈ.ವಿ. ರಮಣ ರೆಡ್ಡಿ ಚಾಲನೆ ನೀಡಿದರು. ನಬಾರ್ಡ್ ನ ಪ್ರಧಾನ ವ್ಯವಸ್ಥಾಪಕ ಟಿ. ರಮೇಶ್, ಆರ್‌ಬಿಐ ಮುಖ್ಯ ಮಹಾ ವ್ಯವಸ್ಥಾಪಕ ಪಿ. ಎನ್. ರಘುನಾಥ್ ಮತ್ತಿತರರು ಇದ್ದರು.

Prajavani Pg.02

ಗ್ರಾಮೀಣ ಸಂಸ್ಥೆಗಳಿಗೆ ನಬಾರ್ಡ್‌ನಿಂದ ₹ 24,603 ಕೋಟಿ ಮರು ಹಣಕಾಸು ನೆರವು

₹3.5 ಲಕ್ಷ ಕೋಟಿ ಸಾಲ ವಿತರಣೆ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಈ ಸಾಲಿಗೆ ₹ 3.5 ಲಕ್ಷ ಕೋಟಿ ಕೃಷಿ ಸಾಲ ವಿತರಣೆಯ ಗುರಿ ಹೊಂದಲಾಗಿದೆ' ಎಂದು ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ.ಇ.ವಿ.ರಮಣ ರೆಡ್ಡಿ ಅವರು ಹೇಳಿದರು.

ನಗರದಲ್ಲಿ ಸೋಮವಾರ ನಡೆದ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ರಾಷ್ಟ್ರೀಯ ಬ್ಯಾಂಕ್‌ನ (ನಬಾರ್ಡ್) 42ನೇ ಸಂಸ್ಥಾಪನಾ ದಿನಾಚರಣೆ ಮತ್ತು ರೈತ ಉತ್ಪಾದಕ ಸಂಸ್ಥೆ ಹಾಗೂ ರಾಗಿ ಬೆಳೆ ಉತ್ಪಾದಕ ಸಂಸ್ಥೆಗಳಿಗೆ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ರಾಜ್ಯ ಸರ್ಕಾರ ಶೂನ್ಯ ಬಡ್ಡಿ ದರದಲ್ಲಿ ಅಲ್ಪಾವಧಿ ಸಾಲ ವಿತರಿಸುತ್ತಿದೆ. ಸಾಲದ ವಿತರಣೆ ಮೊತ್ತವನ್ನು ಈ ಬಾರಿ ಬಜೆಟ್‌ನಲ್ಲಿ ₹ 3 ಲಕ್ಷದಿಂದ ₹ 5 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಗ್ರಾಮೀಣ ಹಣಕಾಸು ಸಂಸ್ಥೆಗಳ ಬಲವರ್ಧನೆಗೆ ನಬಾರ್ಡ್ ನೆರವಾಗುತ್ತಿದೆ' ಎಂದು ಹೇಳಿದರು.

'ನಬಾರ್ಡ್' ನೆರವಿನಿಂದ ರಾಜ್ಯದಲ್ಲಿ ಹೆಚ್ಚುವರಿಯಾಗಿ 4 ಲಕ್ಷ ಹೆಕ್ಟೇರ್‌ಗೆ ನೀರಾವರಿ ಸೌಲಭ್ಯ, 44 ಸಾವಿರ ಕಿ.ಮೀಗೂ ಹೆಚ್ಚು ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಮಾಡಲಾಗಿದೆ. ಜತೆಗೆ, ಮಾರುಕಟ್ಟೆ, ಗೋದಾಮು ನಿರ್ಮಾಣ, ಕೃಷಿ ಉಪ ಕಸುಬುಗಳಿಗೆ ನೆರವು ನೀಡುತ್ತಿರುವುದು ಶ್ಲಾಘನೀಯ ಕೆಲಸ' ಎಂದು ಹೇಳಿದರು.

ನಬಾರ್ಡ್‌ನ ಮುಖ್ಯ ಪ್ರಧಾನ ವ್ಯವಸ್ಥಾಪಕ ಟಿ.ರಮೇಶ್ ಮಾತನಾಡಿ, '1982ರಲ್ಲಿ ನಬಾರ್ಡ್ ಬಜೆಟ್ ಗಾತ್ರವು ₹ 4,519 ಕೋಟಿ ಇತ್ತು. ಈಗ ₹ 8 ಲಕ್ಷ ಕೋಟಿಗೆ ಏರಿಕೆಯಾಗಿದೆ. ಪ್ರಸಕ್ತ ಸಾಲಿನಲ್ಲಿ ಗ್ರಾಮೀಣ ಹಣಕಾಸು ಸಂಸ್ಥೆಗಳಿಗೆ ನಬಾರ್ಡ್ ₹ 24,603 ಕೋಟಿ ಮರು ಹಣಕಾಸು ನೆರವು ಕಲ್ಪಿಸಿದ್ದು ಇದು ದಾಖಲೆಯಾಗಿದೆ' ಎಂದು ಬಣ್ಣಿಸಿದರು.

ಮೂರು ವರ್ಷಗಳಲ್ಲಿ 35 ಸಾವಿರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳನ್ನು ಬಹು ಸೇವಾ ಕೇಂದ್ರಗಳನ್ನಾಗಿ ಪರಿವರ್ತಿಸಲಾಗಿದೆ. 5,491 ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಗಣಕೀಕರಣ ಮಾಡಲು ಗುರುತಿಸಲಾಗಿದೆ ಎಂದು ವಿವರಿಸಿದರು.

ಆರ್‌ಬಿಐ ಮುಖ್ಯ ಪ್ರಧಾನ ವ್ಯವಸ್ಥಾಪಕ ಪಿ.ಎನ್. ರಘುನಾಥ್, ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ವಿ.ಸುರೇಶ್, ಕೆನರಾ ಬ್ಯಾಂಕ್‌ನ ಜನರಲ್ ಮ್ಯಾನೇಜರ್ ಎ. ಮುರಳಿ ಕೃಷ್ಣ ಇದ್ದರು.

ಸಂಸ್ಥಾಪನಾ ದಿನಾಚರಣೆಯಲ್ಲಿ ಚಿತ್ರದುರ್ಗ ಜಿಲ್ಲೆಯ ದುರ್ಗ ಸಿರಿಧಾನ್ಯ ಉತ್ಪಾದಕ ಸಂಸ್ಥೆ, ಕೊಪ್ಪಳದ ಸಿರಿ, ಹಾವೇರಿಯ ಭೂಸಿರಿ, ಉತ್ತರ ಕನ್ನಡದ ಪ್ರಗತಿ ಮಿತ್ರ, ಚಿಕ್ಕಬಳ್ಳಾಪುರದ ಯಲ್ದಂಪಳ್ಳಿ ರೈತ ಉತ್ಪಾದಕ ಸಂಸ್ಥೆಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.



ಬೆಂಗಳೂರಿನಲ್ಲಿ ಸೋಮವಾರ ನಡೆದ ನಬಾರ್ಡ್‌ನ 42ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ದುರ್ಗದ ಸಿರಿಧಾನ್ಯ ರೈತ ಉತ್ಪಾದಕ ಸಂಸ್ಥೆ, ಕೊಪ್ಪಳದ 'ಸಿರಿ', ಹಾವೇರಿ 'ಭೂಸಿರಿ' ಸಂಸ್ಥೆಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಬೆಂಗಳೂರು ಕೃಷಿ ವಿವಿ ಕುಲಪತಿ ಎಸ್. ವಿ.ಸುರೇಶ್, ನಬಾರ್ಡ್‌ನ ಮುಖ್ಯ ಪ್ರಧಾನ ವ್ಯವಸ್ಥಾಪಕ ಟಿ.ರಮೇಶ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇ.ವಿ.ರಮಣರೆಡ್ಡಿ, ಆರ್‌ಬಿಐನ ಮುಖ್ಯ ಪ್ರಧಾನ ವ್ಯವಸ್ಥಾಪಕ ಪಿ.ಎನ್.ರಘುನಾಥ್, ಕೆನರಾ ಬ್ಯಾಂಕ್‌ನ ಜಿಎಂ ಮುರಳಿ ಕೃಷ್ಣ ಇದ್ದರು

— ಪ್ರಜಾವಾಣಿ ಚಿತ್ರ

38 ರೈತ ಉತ್ಪಾದನಾ ಸಂಸ್ಥೆ ಸ್ಥಾಪನೆ

ಇದು ಅಂತರರಾಷ್ಟ್ರೀಯ ಸಿರಿಧಾನ್ಯ ವರ್ಷವಾಗಿದೆ. ಈ ಬಾರಿ ಸಿರಿಧಾನ್ಯ ಬೆಳೆಯಲು ನಬಾರ್ಡ್ ಹೆಚ್ಚಿನ ಒತ್ತು ನೀಡುತ್ತಿದೆ. ಸಿರಿಧಾನ್ಯವನ್ನು ಮುಖ್ಯ ಆಹಾರವಾಗಿಸುವ ಪ್ರಯತ್ನಗಳು ನಡೆಯುತ್ತಿವೆ. ನಬಾರ್ಡ್ ಕೆಲವು ಕ್ರಮ ಸಹ ಕೈಗೊಂಡಿದೆ. ಇದಕ್ಕಾಗಿ 38 ರೈತ ಉತ್ಪಾದನಾ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ ಎಂದು ರಮಣ ರೆಡ್ಡಿ ಹೇಳಿದರು.

Kannadaprabha Pg.03

ಪ್ರಶಂಸೆ ನಬಾರ್ಡ್ 42ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಅಪರ ಕಾರ್ಯದರ್ಶಿ ರಮಣರೆಡ್ಡಿ ಮೆಚ್ಚುಗೆ

'ಗ್ರಾಮಾಭಿವೃದ್ಧಿಯಲ್ಲಿ ನಬಾರ್ಡ್ ಮಹತ್ತರ ಪಾತ್ರ'

• ಕನ್ನಡಪ್ರಭ ವಾರ್ತೆ ಬೆಂಗಳೂರು

ಭವಿಷ್ಯದಲ್ಲಿ ಹವಾಮಾನ ವೈಪರೀತ್ಯ, ಗ್ರಾಮೀಣ-ನಗರ ವಲಸೆ ಮತ್ತು ಡಿಜಿಟಲ್ ಬೆಳವಣಿಗೆಗಳ ಕುರಿತು ನಬಾರ್ಡ್ ಹಾಗೂ ಸರ್ಕಾರ ಒಟ್ಟಾಗಿ ಕೆಲಸ ಮಾಡಬೇಕಿದೆ ಎಂದು ರಾಜ್ಯ ಸರ್ಕಾರದ ಅಪರ ಕಾರ್ಯದರ್ಶಿ ಡಾ। ಇ.ವಿ.ರಮಣ ರೆಡ್ಡಿ ಹೇಳಿದರು.

ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ನ (ನಬಾರ್ಡ್) ಸೋಮವಾರ 42ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಮಾತನಾಡಿದರು. ಗ್ರಾಮೀಣಾಭಿವೃದ್ಧಿ ವಿಚಾರದಲ್ಲಿ ನಬಾರ್ಡ್ ಸಹಕಾರ ಮಹತ್ತರವಾದುದು. ಮುಂದಿನ ದಿನಗಳಲ್ಲಿ ಗ್ರಾಮೀಣ, ನಗರಗಳ ನಡುವಿನ ಡಿಜಿಟಲ್ ಅಸಮಾನತೆ ತೊಡೆಯುವುದು, ಕೃಷಿ ಮೇಲಾಗುವ ಹವಾಮಾನ ವೈಪರೀತ್ಯದ ತೊಂದರೆಯನ್ನು ಸಮರ್ಥವಾಗಿ ಎದುರಿಸಲು ಸಿದ್ಧವಾಗಬೇಕು ಎಂದರು.

ರಾಜ್ಯದಲ್ಲಿ ಸುಮಾರು 4 ಲಕ್ಷ ಹೆಕ್ಟೇರ್ ಹೆಚ್ಚುವರಿ ನೀರಾವರಿ ಸಾಮರ್ಥ್ಯ ಸೃಷ್ಟಿಸಲು ಮತ್ತು 44,000 ಕಿ.ಮೀ. ಹೆಚ್ಚು ಗ್ರಾಮೀಣ ರಸ್ತೆ ಪೂರ್ಣಗೊಳಿಸಲು ನಬಾರ್ಡ್ ಹೆಚ್ಚಿನ ಕೊಡುಗೆ ನೀಡಿದೆ. ಅಲ್ಲದೆ, ಗ್ರಾಮೀಣ ಮಾರುಕಟ್ಟೆಗಳ ನಿರ್ಮಾಣ, ಕೃಷಿ ಉತ್ಪನ್ನ ಗೋದಾಮು, ಪಶುವೈದ್ಯಕೀಯ ಆರೋಗ್ಯ, ಮೂಲಸೌಕರ್ಯ ಇತ್ಯಾದಿಗಳಿಗೆ, ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಧಿ (RIDF) ಮೂಲಕ ಗ್ರಾಮೀಣ ಪ್ರದೇಶಗಳಲ್ಲಿ ವಿವಿಧ ಮೂಲಸೌಕರ್ಯ ಯೋಜನೆಗಳ ಅನುಷ್ಠಾನದಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿದೆ ಎಂದು ಹೇಳಿದರು.

ನಬಾರ್ಡ್‌ನ ಮುಖ್ಯ ಪ್ರಧಾನ ವ್ಯವಸ್ಥಾಪಕ ಮತ್ತು ರಾಜ್ಯ ಮುಖ್ಯಸ್ಥ ಟಿ.ರಮೇಶ್ ಮಾತನಾಡಿದರು. ನಬಾರ್ಡ್ ಸಾಧನೆಯ ಕಾಫೀ ಟೇಬಲ್ ಕೃತಿಯನ್ನು ಬಿಡುಗಡೆ ಮಾಡಲಾಯಿತು. ಈ ವೇಳೆ ಜಿಕೆವಿಕೆ ಉಪಕುಲಪತಿ ಡಾ। ಎಸ್.ವಿ.ಸುರೇಶ್, ಭಾರತೀಯ ರಿಸರ್ವ್ ಬ್ಯಾಂಕ್ ಮುಖ್ಯ ಮಹಾ ವ್ಯವಸ್ಥಾಪಕ ಪಿ.ಎನ್.ರಘುನಾಥ್ ಮತ್ತು ರಾಜ್ಯ ಮಟ್ಟದ ಬ್ಯಾಂಕರುಗಳ ಸಮಿತಿಯ ಸಮನ್ವಯಕಾರ ಎ. ಮುರಳಿಕೃಷ್ಣ ಇದ್ದರು.



ನಬಾರ್ಡ್ ಸಂಸ್ಥಾಪನಾ ದಿನಾಚರಣೆಯಲ್ಲಿ ಕೃಷಿ ಉತ್ಪನ್ನ, ಮಾರುಕಟ್ಟೆಯಲ್ಲಿ ಸಾಧನೆ ಮಾಡಿದ ರೈತ ಉತ್ಪನ್ನ ಸಂಸ್ಥೆಗಳ ಪ್ರತಿನಿಧಿಗಳನ್ನು ಸನ್ಮಾನಿಸಲಾಯಿತು. ಡಾ। ರಮಣ ರೆಡ್ಡಿ, ಟಿ.ರಮೇಶ್ ಇದ್ದರು.

ರೈತ ಉತ್ಪನ್ನ ಸಂಸ್ಥೆಗೆ ಪ್ರಶಸ್ತಿ

ಈ ವೇಳೆ ಸಿರಿಧಾನ್ಯ ಬೆಳೆ ಮಾರುಕಟ್ಟೆಯಲ್ಲಿ ಅನನ್ಯ ಸಾಧನೆ ಮಾಡಿದ ಚಿತ್ರದುರ್ಗದ 'ದುರ್ಗ ಸಿರಿಧಾನ್ಯ', ಕೊಪ್ಪಳದ 'ಕೊಪ್ಪಳ ಸಿರಿ' ಹಾಗೂ ಹಾವೇರಿಯ ಭೂಸಿರಿ ಸಿರಿಧಾನ್ಯ ರೈತ ಉತ್ಪನ್ನಸಂಸ್ಥೆಗಳಿಗೆ ಪುರಸ್ಕರಿಸಲಾಯಿತು. ಜೊತೆಗೆ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ಸಾಧನೆ ಮಾಡಿರುವ ಉತ್ತರಕನ್ನಡದ 'ಪ್ರಗತಿ ಮಿತ್ರ', ಚಿಕ್ಕಬಳ್ಳಾಪುರದ 'ಯೆಲ್ಲಂಪಳ್ಳಿ' ಹಾಗೂ ಬೆಳಗಾವಿಯ ಶ್ರೀ ಮಹಾಂತ ರೈತ ಉತ್ಪನ್ನ ಸಂಸ್ಥೆಗಳ ಪ್ರತಿನಿಧಿಗಳಿಗೆ ಪುರಸ್ಕರಿಸಲಾಯಿತು.

ನಬಾರ್ಡ್‌ನಿಂದ ₹19,013 ಕೋಟಿ ಮಂಜೂರು

ಆರ್‌ಐಡಿಎಫ್ ಮೂಲಕ ಗ್ರಾಮೀಣ ಪ್ರದೇಶಗಳ ಮೂಲ ಸೌಕರ್ಯಕ್ಕೆ ಆದ್ಯತೆ: ಟಿ.ರಮೇಶ್

ಬೆಂಗಳೂರು: ರಾಜ್ಯದ ಹಲವು ಯೋಜನೆಗಳಿಗಾಗಿ ನಬಾರ್ಡ್ ಈವರೆಗೂ ಸುಮಾರು 19,013 ಕೋಟಿ ರೂ. ಮಂಜೂರು ಮಾಡಿದ್ದು ಅದರಲ್ಲಿ ಈಗಾಗಲೇ ಸುಮಾರು 15,080 ಕೋಟಿ ರೂ. ವಿತರಣೆ ಮಾಡಿದೆ ಎಂದು ನಬಾರ್ಡ್‌ನ ಮುಖ್ಯ ಪ್ರಧಾನ ವ್ಯವಸ್ಥಾಪಕ ಹಾಗೂ ರಾಜ್ಯ ಮುಖ್ಯಸ್ಥ ಟಿ. ರಮೇಶ್ ಹೇಳಿದರು.

ನಬಾರ್ಡ್‌ನ 42ನೇ ಸಂಸ್ಥಾಪನಾ ದಿನಾಚರಣೆ ಹಿನ್ನೆಲೆಯಲ್ಲಿ ಕೆ.ಜಿ.ರಸ್ತೆಯ ನಬಾರ್ಡ್ ಸಭಾಂಗಣದಲ್ಲಿ ಸೋಮವಾರ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಸಿರಿಧಾನ್ಯ ವಲಯದಲ್ಲಿ ಉತ್ತಮ ಸೇವೆ ಸಲ್ಲಿಸಿದ ಮೂವರು ರೈತ ಉತ್ಪಾದಕ ಸಂಸ್ಥೆಗಳು ಮತ್ತು ಮೂವರು ರೈತ ಸಾಧಕರನ್ನು ಸನ್ಮಾನಿಸಿ ಅವರು ಮಾತನಾಡಿದರು.

ಗ್ರಾಮೀಣ ಪ್ರದೇಶದ ಬೆನ್ನೆಲುಬಾಗಿರುವ ನಬಾರ್ಡ್ ಗ್ರಾಮೀಣ ಮೂಲಸೌಲಭ್ಯ ಅಭಿವೃದ್ಧಿ ನಿಧಿ (ಆರ್‌ಐಡಿಎಫ್) ಮೂಲಕ ಗ್ರಾಮೀಣ ಪ್ರದೇಶಗಳ ಮೂಲ ಸೌಕರ್ಯಕ್ಕೆ ಆದ್ಯತೆ ನೀಡಿದೆ. ಈಗಾಗಲೇ ಸುಮಾರು 4,10,888 ಹೆಕ್ಟೇರ್ ಪ್ರದೇಶವನ್ನು ನೀರಾವರಿಗೆ ಒಳಪಡಿಸಿದ್ದು 55,502 ಮೀಟರ್ ಗ್ರಾಮೀಣ ಸೇತುವೆಗಳನ್ನು ನಿರ್ಮಿಸಿದೆ. ಜತೆಗೆ 839 ಗ್ರಾಮೀಣ ಕೃಷಿ ಮಾರುಕಟ್ಟೆ 13,480 ಗ್ರಾಮೀಣ ಶಿಕ್ಷಣ ಸಂಸ್ಥೆಗಳಿಗೆ, 338 ಸಾರ್ವಜನಿಕ ಆರೋಗ್ಯ ಸಂಸ್ಥೆಗಳಿಗೆ ಮತ್ತು 258 ರೈತ ಸಂಪರ್ಕ ಕೇಂದ್ರಗಳಿಗೆ ಆರ್ಥಿಕ ನೆರವು ನೀಡಿದೆ ಎಂದರು.

'ಸಹಕಾರಿ ಸಂಸ್ಥೆಗಳ ಮೂಲಕ ಸಮೃದ್ಧಿ' ಪರಿಕಲ್ಪನೆ ಮೂಲಕ ಆಹಾರ ಭದ್ರತೆ ದೃಢಪಡಿಸುವ ನಿಟ್ಟಿನಲ್ಲಿ ಹೆಜ್ಜೆಯಿರಿಸಿದೆ. ಕೇಂದ್ರ ಸಹಕಾರಿ ಸಚಿವಾಲಯ ವಿಶ್ವದಲ್ಲೇ ಅತಿದೊಡ್ಡ ಧಾನ್ಯ ಸಂಗ್ರಹಣ ಸ್ಥಾಪಿಸುವ ಯೋಜನೆ ರೂಪಿಸಿದೆ. ಕೃಷಿ ಉಪಕರಣಗಳ ಬಾಡಿಗೆ ಕೇಂದ್ರಗಳು ಮತ್ತು ಸಂಸ್ಕರಣಾ ಘಟಕಗಳನ್ನು ಒಳಗೊಂಡಂತೆ ಕೃಷಿ ಮೂಲ ಸೌಕರ್ಯ ಒದಗಿಸಲು ಗಮನ ನೀಡಲಾಗಿದೆ ಎಂದು ಹೇಳಿದರು.

ಬೆಂಗಳೂರು ಕೃಷಿ ವಿವಿಯ ಉಪ ಕುಲಪತಿ ಡಾ.ಸುರೇಶ ಮಾತನಾಡಿ, ನಬಾರ್ಡ್ ಗ್ರಾಮೀಣ ಪ್ರದೇಶದ ಏಳಿಗೆ ಬೆನ್ನೆಲುಬಾಗಿ ನಿಂತಿದೆ. ಈ ಸಂಸ್ಥೆ ನೀರಾವರಿ, ರಸ್ತೆ ಮತ್ತು ಮೂಲ ಸೌಕರ್ಯ ಅಭಿವೃದ್ಧಿಕ್ಷೇತ್ರಕ್ಕೂ ಅಮೂಲ್ಯ ಕೊಡುಗೆ ನೀಡಿದೆ. ಬೆಂಗಳೂರು ಕೃಷಿ ವಿವಿ ಹಮ್ಮಿಕೊಳ್ಳುವ ಕೃಷಿ ಮೇಳ, ಸಿರಿಧಾನ್ಯ ಮೇಳಕ್ಕೂ ಬೆಂಬಲ ನೀಡುತ್ತಾ ರೈತರ ವರ್ಗವನ್ನು ಪ್ರೋತ್ಸಾಹಿಸುತ್ತಿದೆ ಎಂದರು.

ಆರ್‌ಬಿಐನ ಮುಖ್ಯ ಮಹಾ ವ್ಯವಸ್ಥಾಪಕ ಮರುಳಿಕೃಷ್ಣ ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿಯ ಸಮನ್ವಯಕಾರ ಎ.ಮುರಳಿಕೃಷ್ಣ ಸೇರಿ ನಬಾರ್ಡ್‌ನ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.



ನಬಾರ್ಡ್‌ನ 42ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಸಿರಿಧಾನ್ಯ ವಲಯದಲ್ಲಿ ಉತ್ತಮ ಸೇವೆ ಸಲ್ಲಿಸಿದ ಮೂವರು ರೈತ ಉತ್ಪಾದಕ ಸಂಸ್ಥೆಗಳು ಮತ್ತು ಮೂವರು ರೈತ ಸಾಧಕರನ್ನು ಗೌರವಿಸಲಾಯಿತು.

ರೈತರ ಸಾಲದ ಮಿತಿ ಹೆಚ್ಚಳ

ರೈತರಿಗಾಗಿ ರಾಜ್ಯ ಸರ್ಕಾರ ಹಲವು ಯೋಜನೆ ರೂಪಿಸಿದೆ. ಬಜೆಟ್‌ನಲ್ಲಿ ರಾಜ್ಯದ ರೈತರಿಗೆ ಕೊನ್ನ ಬಡ್ಡಿದರದಲ್ಲಿ ನೀಡಲಾಗುತ್ತಿದ್ದ ಅಲ್ಪಾವಧಿ ಸಾಲದ ಮಿತಿಯನ್ನು ಮೂರು ಲಕ್ಷ ರೂ.ಗಳಿಂದ ಐದು ಲಕ್ಷ ರೂ.ಗಳಿಗೆ ಹೆಚ್ಚಿಸುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ರೈತಪರವಾಗಿ ಕೆಲಸ ಮಾಡುತ್ತಿದೆ ಎಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತ ಡಾ.ಇ.ವಿ.ರಮಣ ರೆಡ್ಡಿ ಹೇಳಿದರು. ಗ್ರಾಮೀಣ ಪ್ರದೇಶದ ಅಭಿವೃದ್ಧಿಯಲ್ಲಿ ನಬಾರ್ಡ್ ಮಹತ್ವದ ಕೊಡುಗೆ ನೀಡಿದೆ. ಕೇವಲ ಒಂದು ಕ್ಷೇತ್ರಕ್ಕೆ ಸೀಮಿತವಾಗದೆ ಹಲವು ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದೆ ಎಂದು ಶ್ಲಾಘಿಸಿದರು.

Udayavani Pg.06

Prajavani Pg.08

ಕೋವಿಡ್ ಬಳಿಕ ಸಿಗುತ್ತಿರುವ ಉತ್ತಮ ದರ: ವಿವಿಧ ನಗರಗಳಿಗೆ 8,300 ಟನ್ ರವಾನೆ

ದಾಳಿಂಬೆ ಬೆಳೆಗೆ ಬಂತು ಬಂಪರ್ ಬೆಲೆ

• ಸಿ.ಶಿವಾನಂದ

ಹಗರಿಬೊಮ್ಮನಹಳ್ಳಿ (ವಿಜಯನಗರ ಜಿಲ್ಲೆ): ನಾಲ್ಕೈದು ವರ್ಷಗಳಿಂದ ಉತ್ತಮ ಬೆಲೆ ಸಿಗದೆ ಬಸವಳಿದಿದ್ದ ತಾಲ್ಲೂಕಿನ ದಾಳಿಂಬೆ ಬೆಳೆಗಾರರಿಗೆ ಈ ವರ್ಷ ಕೆ.ಜಿ.ಗೆ ₹160ರವರೆಗೂ ಬೆಲೆ ದೊರೆತಿದೆ.

ತಾಲ್ಲೂಕಿನ ಗದ್ದಿಕೇರಿ, ಜಿ.ಕೋಡಿಹಳ್ಳಿ, ಏಣಿಗಿ, ಏಣಿಗಿ ಬಸಾಪುರ, ಅಂಕಸಮುದ್ರ, ಬಾಚಿಗೊಂಡನಹಳ್ಳಿ ಸೇರಿದಂತೆ ಹಲವು ಗ್ರಾಮಗಳಲ್ಲಿ 2,650 ಹೆಕ್ಟೇರ್ ಪ್ರದೇಶದಲ್ಲಿ 'ಬಗವಾ' ತಳಿಯ ದಾಳಿಂಬೆ ಬೆಳೆಯಲಾಗಿದೆ. ದೇಶದ ವಿವಿಧ ನಗರಗಳಿಗೆ 8,300 ಟನ್ ದಾಳಿಂಬೆ ಇದುವರೆಗೆ ರವಾನೆಯಾಗಿದೆ. ಸಾಮಾನ್ಯ ದಾಳಿಂಬೆಗೂ ರೈತರು ಪ್ರತಿ ಕೆ.ಜಿ.ಗೆ ಕನಿಷ್ಠ ₹ 80 ಪಡೆದಿದ್ದಾರೆ.

ಈ ವರ್ಷ ದಾಳಿಂಬೆ ಕೈ ಹಿಡಿದಿದೆ, ಉತ್ತಮ ಬೆಲೆ ಮತ್ತು ಇಳುವರಿ ಬಂದಿದೆ. ಸಾಲದಿಂದ ಪಾರಾಗಲು ಸಾಧ್ಯವಾಗಿದೆ
ಸುರೇಶ್, ದಾಳಿಂಬೆ ಬೆಳೆಗಾರ, ಗದ್ದಿಕೇರಿ.

ಬಗವಾ ತಳಿಯ ಗಾತ್ರ ಮತ್ತು ಕೆಂಪು ಬಣ್ಣ ಉತ್ತಮ ಬೆಲೆ ತಂದುಕೊಡುತ್ತಿದೆ. ಉತ್ತಮ ನಿರ್ವಹಣೆಯಿಂದ ಹೆಚ್ಚು ಲಾಭ ನಿಶ್ಚಿತ
ನಾಗರಾಜ, ಸಹಾಯಕ ತೋಟಗಾರಿಕೆ ನಿರ್ದೇಶಕ, ಹಗರಿಬೊಮ್ಮನಹಳ್ಳಿ

ಕೋವಿಡ್‌ಗಿಂತ ಮೊದಲು ಬೆಳೆಗಾರರಿಗೆ ಕೆ.ಜಿ.ದಾಳಿಂಬೆಗೆ ₹230 ಸಿಕ್ಕಿತ್ತು. ಅದು ಈ ಭಾಗದಲ್ಲಿ ರೈತರು ಪಡೆದ ಗರಿಷ್ಠ ದರವಾಗಿತ್ತು. ಕೋವಿಡ್ ನಂತರ ಇದೀಗ ದಾಳಿಂಬೆಗೆ ಉತ್ತಮ ದರ ಸಿಗುತ್ತಿದೆ.



ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಗದ್ದಿಕೇರಿಯಲ್ಲಿ ದಾಳಿಂಬೆ ಪ್ಯಾಕಿಂಗ್ ಕೆಲಸದಲ್ಲಿ ನಿರತರಾಗಿರುವ ಕಾರ್ಮಿಕರು

'ಇಲ್ಲಿನ ದಾಳಿಂಬೆಗೆ ಬೆಂಗಳೂರು, ಕೋಲ್ಕತ್ತ, ಚೆನ್ನೈ, ಮುಂಬೈ ಮಾರುಕಟ್ಟೆಗಳಲ್ಲಿ ಭಾರಿ ಬೇಡಿಕೆ ಇದೆ' ಎನ್ನುತ್ತಾರೆ ಗದ್ದಿಕೇರಿಯ ದಾಳಿಂಬೆ ಖರೀದಿದಾರ ಸಿ.ರಮೇಶ್. ರೈತರು ಪ್ರತಿ ಎಕರೆಯಲ್ಲಿ 300ರಿಂದ 350 ಗಿಡಗಳನ್ನು ನಾಟ ಮಾಡಿದ್ದಾರೆ. ಕಟಾವಿನ ಸಂದರ್ಭದಲ್ಲಿ ಎಲ್ಲ ಗಿಡಗಳಿಗೂ ಬಟ್ಟೆಯ ಹೊದಿಕೆ ಹಾಗೂ ಹಸಿರು ಚಪ್ಪರ ಹಾಕಿ ಬೇಸಿಗೆಯಲ್ಲಿ ಸೂರ್ಯನ ಶಾಖದಿಂದ ಹಣ್ಣು ಅಂದಗೆಡುವುದನ್ನು ತಪ್ಪಿಸಿದ್ದಾರೆ. ಉತ್ಪನ್ನದ ಗಾತ್ರದ ಜತೆಗೆ ಬಣ್ಣಕ್ಕೂ ಆದ್ಯತೆ ನೀಡಿದ್ದಾರೆ. ಮಾರುಕಟ್ಟೆಯಲ್ಲಿ ಗಾತ್ರ ಮತ್ತು ಕೆಂಪು ವರ್ಣದ ದಾಳಿಂಬೆಗೆ ಅತ್ಯುತ್ತಮ ಬೆಲೆ ದೊರೆಯುತ್ತದೆ.

ಈ ಬಾರಿ ದುಂಡಾಣು ಮಚ್ಚೆರೋಗ ಅಷ್ಟಾಗಿ ಕಾಣಿಸದಿರುವುದರಿಂದ ರೈತರ ಮತ್ತಷ್ಟು ಖುಷಿಪಡುವಂತಾಗಿದೆ. ಕಟಾವು ಸಂದರ್ಭದಲ್ಲಿ ನೂರಾರು ಜನರಿಗೆ ಉದ್ಯೋಗ ದೊರಕುತ್ತದೆ. ತಾಲ್ಲೂಕಿನ ಹಂಪಾಪಟ್ಟಣ, ಅಡವಿ ಆನಂದೇವನಹಳ್ಳಿ, ಅಂಕಸಮುದ್ರ ಸೇರಿದಂತೆ ಹಲವು ಗ್ರಾಮಗಳಿಂದ ಯುವಕರು ತಂಡೋಪತಂಡವಾಗಿ ಹೋಗುತ್ತಿದ್ದಾರೆ. ಉತ್ತಮ ಕೂಲಿ ಪಡೆಯುತ್ತಿದ್ದಾರೆ. ಖರೀದಿದಾರರು ತೋಟಕ್ಕೆ ಬಂದು ದಾಳಿಂಬೆ ತೆಗೆದುಕೊಂಡು ಹೋಗುತ್ತಿರುವುದರಿಂದ ರೈತರು ಸಾಗಣೆಯ ಕಿರಿಕಿರಿಯಿಂದಲೂ ಪಾರಾಗಿದ್ದಾರೆ.

ಉದಯವಾಣಿ
ಮಂಗಳವಾರ, ಜುಲೈ 18, 2023

ಸಿಎಂ ನೇತೃತ್ವದಲ್ಲಿ ಮಹತ್ವದ ಸಭೆ

ವಿಧಾನಮಂಡಲ ಅಧಿವೇಶನ



ಮುಂಗಾರು ಹಂಗಾಮು: ಶೇ.36 ಮಳೆ ಕೊರತೆ

ಬಿತ್ತನೆ ಆಗಿದ್ದು ಶೇ.33 ಮಾತ್ರ ■ ಕೃಷಿ ಚಟುವಟಿಕೆ ಉತ್ತೇಜನಕ್ಕೆ ಸರ್ಕಾರದಿಂದ ಅಗತ್ಯ ಕ್ರಮ: ಕೃಷಿ ಸಚಿವ

ವಿಧಾನಪರಿಷತ್ತು: ರಾಜ್ಯದಲ್ಲಿ ಪ್ರಸ್ತುತ ಸಾಲಿನ ಮುಂಗಾರು ಹಂಗಾಮಿನಲ್ಲಿ ಶೇ.36 ಮಳೆ ಕೊರತೆಯಾಗಿದ್ದು, ಶೇ.33 ಬಿತ್ತನೆಯಾಗಿದೆ. ಬರಗಾಲ ಘೋಷಿಸುವ ಸಂಬಂಧ ಸಚಿವ ಸಂಪುಟದ ಉಪಸಮಿತಿಯಲ್ಲಿ ಚರ್ಚಿಸಿ ಮಾನದಂಡಗಳ ಪ್ರಕಾರ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದ್ದಾರೆ.



ನಿಯಮ 72ರಡಿ ಬಿಜೆಪಿಯ ಹೇಮಲತಾ ನಾಯಕ್ ಪ್ರಸ್ತಾಪಿಸಿದ ವಿಷಯಕ್ಕೆ ಉತ್ತರಿಸಿದ ಕೃಷಿ ಸಚಿವರು, ರಾಜ್ಯದಲ್ಲಿ ಮುಂಗಾರು 10 ದಿನ ತಡವಾಗಿ ಆರಂಭವಾಗಿದೆ. ಶೇ. 36 ರಷ್ಟು ಮಳೆ ಕೊರತೆಯಾಗಿದೆ. ಕಳೆದ ಬಾರಿಗಿಂತ ಶೇ.10 ಕಡಿಮೆ ಬಿತ್ತನೆ ಕಾರ್ಯ ನಡೆದಿದ್ದು, ಕೃಷಿ ಚಟುವಟಿಕೆ ಉತ್ತೇಜನಕ್ಕೆ ಅಗತ್ಯ ಕ್ರಮ ವಹಿಸಲಾಗುವುದು ಎಂದರು.

ರಾಜ್ಯಾದ್ಯಂತ ನೈರುತ್ಯ ಮುಂಗಾರು ಮಳೆಯು ಈ ತಿಂಗಳ 7ರಂತೆ ವಾಡಿಕೆ ಮಳೆ 257 ಮಿಮೀ ಗೆ ಪ್ರತಿಯಾಗಿ, 166 ಮಿಮೀ ಮಳೆಯಾಗಿದ್ದು, ಶೇ. 36 ಕೊರತೆಯಾಗಿರುತ್ತದೆ. ಉತ್ತರ ಕರ್ನಾಟಕದ ಜಿಲ್ಲೆಗಳಾದ ಬಾಗಲಕೋಟೆ, ಬಳ್ಳಾರಿ, ಬೆಳಗಾವಿ, ಧಾರವಾಡ, ಗದಗ, ಹಾವೇರಿ, ಕಲಬುರಗಿ, ಕೊಪ್ಪಳ, ರಾಯಚೂರು, ವಿಜಯಪುರ, ವಿಜಯನಗರ, ಹಾಗೂ ಯಾದಗಿರಿಯಲ್ಲಿ ಜುಲೈ 7ರಂತೆ ವಾಡಿಕೆ ಮಳೆ 124 ಮಿಮೀ ಗೆ ಪ್ರತಿಯಾಗಿ, 76 ಮಿಮೀ ಮಳೆಯಾಗಿದ್ದು, ಶೇ.39 ಕೊರತೆಯಾದೆ ಎಂದು ಮಾಹಿತಿ ನೀಡಿದರು.

ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ರಾಜ್ಯದಲ್ಲಿ ವಿವಿಧ ಕೃಷಿ ಬೆಳೆಗಳನ್ನು 82.35 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಬಿತ್ತನೆ ಕೈಗೊಳ್ಳುವ ಗುರಿ ಹಮ್ಮಿಕೊಳ್ಳಲಾಗಿದೆ. ಆದರೆ, ಜುಲೈ 7 ರಂತೆ 26.82 ಲಕ್ಷ ಹೆಕ್ಟೇರ್ (ಶೇ.33)ಗಳಲ್ಲಷ್ಟೇ ಬಿತ್ತನೆಯಾಗಿದೆ. ಉತ್ತರ ಕರ್ನಾಟಕ ಭಾಗದಲ್ಲಿ ಮುಂಗಾರು ಹಂಗಾಮಿಗೆ ಸುಮಾರು 37.67 ಲಕ್ಷ ಹೆಕ್ಟೇರ್‌ರಷ್ಟು ಮಳೆಯಾಶ್ರಿತ ಹಾಗೂ 18.54 ಲಕ್ಷ ಹೆಕ್ಟೇರ್‌ರಷ್ಟು ನೀರಾವರಿ ಪ್ರದೇಶದಲ್ಲಿ ಬಿತ್ತನೆ ಕೈಗೊಳ್ಳಲಾಗುತ್ತದೆ. ಈ ಮುಂಗಾರು ಹಂಗಾಮಿಗೆ ಬಾಗಲಕೋಟೆ, ಬಳ್ಳಾರಿ, ಬೆಳಗಾವಿ, ಧಾರವಾಡ, ಗದಗ, ಹಾವೇರಿ, ಕಲಬುರಗಿ, ಕೊಪ್ಪಳ, ರಾಯಚೂರು, ವಿಜಯಪುರ, ವಿಜಯನಗರ, ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ 56.20 ಲಕ್ಷ ಹೆಕ್ಟೇರ್‌ರಷ್ಟು ಬಿತ್ತನೆ ಗುರಿ ಇದ್ದು, ಈವರೆಗೆ 20.60 ಲಕ್ಷ ಹೆಕ್ಟೇರ್ (ಶೇ.36) ರಷ್ಟರಲ್ಲಿ ಬಿತ್ತನೆಯಾಗಿದೆ. ಈ ಜಿಲ್ಲೆಗಳಲ್ಲಿ ಪ್ರಮುಖವಾಗಿ ಮುಸುಕಿನ ಜೋಳ, ತೊಗರಿ, ಹತ್ತಿ, ಕಬ್ಬು, ಹೆಸರು, ಉದ್ದು, ಭತ್ತ, ಸೂರ್ಯಕಾಂತಿ ಹಾಗೂ ಶೇಂಗಾ ಬೆಳೆಗಳನ್ನು ಬೆಳೆಯಲಾಗುತ್ತದೆ ಎಂದು ಸಚಿವರು ತಿಳಿಸಿದರು.

ಕೃಷಿ ಪಂಡಿತ ಪ್ರಶಸ್ತಿಗೆ ಅರ್ಜಿ

ಬೆಂಗಳೂರು: ರಾಜ್ಯ ಕೃಷಿ ಕ್ಷೇತ್ರದಲ್ಲಿ ವಿನೂತನ/ಹೊಸ ಅನ್ವೇಷಣೆ ಕಾರ್ಯಗಳಿಂದ ವಿಭಿನ್ನ ಸಾಧನೆ ಮಾಡಿದ ಸೃಜನಶೀಲ ರೈತ ಮತ್ತು ರೈತ ಮಹಿಳೆಯರಿಂದ 2023-24ನೇ ಸಾಲಿನ ಕೃಷಿ ಪಂಡಿತ ಪ್ರಶಸ್ತಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜು.24ರಂದು ಕೊನೆಯ ದಿನ. ಅರ್ಜಿ ನಮೂನೆ, ಸಲ್ಲಿಸಬೇಕಾದ ದಾಖಲಾತಿ, ಅರ್ಹತೆ ಮತ್ತಿತರ ಹೆಚ್ಚಿನ ಮಾಹಿತಿಗಾಗಿ ಹತ್ತಿರದ ರೈತ ಸಂಪರ್ಕ ಕೇಂದ್ರದ (ಆರ್‌ಎಸ್‌ಕೆ) ಕೃಷಿ ಅಧಿಕಾರಿ ಅಥವಾ ತಾಲೂಕು ಸಹಾಯಕ ಕೃಷಿ ನಿರ್ದೇಶಕರನ್ನು ಸಂಪರ್ಕಿಸಬಹುದು ಎಂದು ಕೃಷಿ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

Vijayavani Pg.06

ಕೃಷಿ ಪಂಡಿತ ಪ್ರಶಸ್ತಿಗೆ ಅರ್ಜಿ ಆಹ್ವಾನ

ಬೆಂಗಳೂರು: ರಾಜ್ಯ ಕೃಷಿ ಕ್ಷೇತ್ರದಲ್ಲಿ ವಿನೂತನ/ಹೊಸ ಅನ್ವೇಷಣೆ ಮತ್ತು ಸೃಜನಾತ್ಮಕ ಕಾರ್ಯಗಳಿಂದ ವಿಭಿನ್ನ ಸಾಧನೆ ಮಾಡಿದ ಸೃಜನಶೀಲ ರೈತ ಮತ್ತು ರೈತ ಮಹಿಳೆಯರಿಂದ 2023-24ನೇ ಸಾಲಿನ ಕೃಷಿ ಪಂಡಿತ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಿದೆ. ಅರ್ಜಿ ಸಲ್ಲಿಸಲು 24ನೇ ಜುಲೈ 2023 ರಂದು ಕೊನೆಯ ದಿನಾಂಕವಾಗಿದ್ದು, ಅರ್ಜಿ ನಮೂನೆ, ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆ, ಸ್ಪರ್ಧಿಸಲು ಅರ್ಹತೆ ಮತ್ತಿತರ ಹೆಚ್ಚಿನ ಮಾಹಿತಿಗಾಗಿ ಹತ್ತಿರದ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿ ಅಥವಾ ತಾಲೂಕು ಸಹಾಯಕ ಕೃಷಿ ನಿರ್ದೇಶಕರನ್ನು ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

Vishwavani Pg.10

ವೀಳ್ಯದೆಲೆಗೆ ಬಂಗಾರದ ಬೆಲೆ

ಅಂಬಾಡಿ ತಳಿಯ ವೀಳ್ಯದೆಲೆ ಈ ಮೊದಲು ಮುಂಬೈ, ಪುಣೆ, ಕೊಲ್ಕತ್ತಾ ಹಾಗೂ ಬನಾರಸ್ ಮಾರುಕಟ್ಟೆಗೆ ಸೀಮಿತವಾಗಿತ್ತು. ಕಳೆದೆರಡು ವರ್ಷಗಳಿಂದ ರಾಜ್ಯದ ರಾಜಧಾನಿ ಬೆಂಗಳೂರು ಕೈ ಹಿಡಿದಿರುವ ಕಾರಣ ದಿನಂಪ್ರತಿ ನೂರಾರು ಡಬ್ಬಿಗಳಲ್ಲಿ ವೀಳ್ಯದೆಲೆ ಪೂರೈಕೆಯಾಗುತ್ತಿರುವುದರಿಂದ ಉತ್ತಮ ಬೆಲೆ ಸಿಗುವಂತಾಗಿದೆ ಎನ್ನುತ್ತಾರೆ ಇಲ್ಲಿನ ರೈತರು.

ಹೆಚ್ಚಿದ ಆಸಕ್ತಿ: ಮಳೆ ಅಭಾವ ಹಾಗೂ ನೀರಿನ ಕೊರತೆ ಕಾರಣ ಈಗ ಸುಮಾರು 250 ಎಕರೆಯಷ್ಟು ಪ್ರದೇಶದಲ್ಲಿ ವೀಳ್ಯದೆಲೆ ಬೆಳೆಯಲಾಗಿದೆ. ಈ ಬಾರಿ ಹೆಚ್ಚಿನ ರೈತರು ವೀಳ್ಯದೆಲೆ ಬೆಳೆಗೆ ಆದ್ಯತೆ ನೀಡಿದ್ದು, ಗ್ರಾಮದ ಸುಮಾರು 400 ಎಕರೆಯಷ್ಟು ಪ್ರದೇಶದಲ್ಲಿ ವೀಳ್ಯದೆಲೆ ನಾಟಿ ಮಾಡಲಾಗುತ್ತಿದೆ.

> “ವೀಳ್ಯದೆಲೆಗೆ ಯಾವತ್ತೂ ಇಷ್ಟೊಂದು ಪ್ರಮಾಣದಲ್ಲಿ ಬೆಲೆ ಬಂದಿರಲಿಲ್ಲ. ಈ ಬಾರಿ ವೀಳ್ಯದೆಲೆ ಬೆಳೆಗಾರರನ್ನು ಕೈಹಿಡಿದಿದೆ. ನೀರಿನ ಅಭಾವದ ಕಾರಣ ಹೆಚ್ಚು ರೈತರು ಬೆಳೆಯಲು ಸಾಧ್ಯವಾಗಿಲ್ಲ. ಮಳೆ ಅನುಕೂಲವಾದರೆ ಜಗದಾಳ ಗ್ರಾಮಕ್ಕೆ ಮತ್ತೆ ಮೆರಗು ಸಿಗಲಿದೆ.
> ■ ಗಂಗಪ್ಪ ಉಳ್ಳಾಗಡ್ಡಿ, ಕೆಎಂಎಫ್ ಮಾಜಿ ಅಧ್ಯಕ್ಷರು, ಪ್ರಗತಿಪರ ರೈತ

Hosadigantha Pg.02

SamyukthaKarnataka Pg.01



ರೈತರು ಶೇಂಗಾ ನಾಟಿ ಮಾಡುವುದರಲ್ಲಿ ನಿರತರಾಗಿದ್ದಾರೆ.

ಗಡಿನಾಡಿಗೆ ವರುಣನ ಅವಕೃಪೆ

■ ಸುಧೀರ ಕುಂಭೋಜಕರ

ಯಕ್ಸಂಬಾ: ಪ್ರಸಕ್ತ ಸಾಲಿನಲ್ಲಿ ಮುಂಗಾರು ಮಳೆ ವಿಳಂಬದಿಂದಾಗಿ ಚಿಕ್ಕೋಡಿ ಮತ್ತು ನಿಪ್ಪಾಣಿ ತಾಲೂಕಿನಲ್ಲಿ ಈವರೆಗೆ ಕೇವಲ ಶೇ. 50ರಷ್ಟು ಮಾತ್ರ ಬಿತ್ತನೆಯಾಗಿದ್ದು, ಇದರ ಜೊತೆಗೆ ವಾಡಿಕೆ ಮಳೆ ಶೇ.80ರಷ್ಟು ಕಡಿಮೆಯಾಗಿರುವುದು ರೈತರಲ್ಲಿ ಆತಂಕ ಮೂಡಿಸಿದೆ.

ಸೋಯಾ, ಗೋವಿನಜೋಳ, ಶೇಂಗಾ, ಹೆಸರು, ಉದ್ದ ಸೇರಿದಂತೆ ವಿವಿಧ ಬೆಳೆಗಳು ಕೇವಲ ಶೇ.50ರಷ್ಟು ಮಾತ್ರ ಬಿತ್ತನೆಯಾಗಿವೆ. ಅದರಲ್ಲೂ ನೀರಿನ ಸೌಲಭ್ಯವಿದ್ದವರು ಮಾತ್ರ ಧೈರ್ಯ ಮಾಡಿ ನಾಟಿ ಮಾಡಿದ್ದಾರೆ.

ಪ್ರಸಕ್ತ ವರ್ಷದ ಮುಂಗಾರು ಪೂರ್ವದಲ್ಲಿ ಅಕಾಲಿಕ ಮಳೆಯಾಗಿಲ್ಲ. ಈ ವರ್ಷದ ಪ್ರಾರಂಭದ ಮೃಗಶಿರಾ ಮತ್ತು ಆರಿದ್ರಾ ಮಳೆ ಸುರಿಯಲಿಲ್ಲ. ಪುನರ್ವಸು ಸುರಿಯುತ್ತಿಲ್ಲ. ಹೀಗಾಗಿ ವರುಣನ ಕೃಪೆಯತ್ತ ರೈತ ಸಮುದಾಯ ಆಕಾಶದತ್ತ ಮುಖ ಮಾಡಿ ಕುಳಿತಿದೆ. ಮೃಗಶಿರಾ ಮತ್ತು ಆರಿದ್ರಾ ಮಳೆ ಸುರಿಯಲಿಲ್ಲ. ಪುನರ್ವಸು ಪ್ರಾರಂಭವಾದಾಗಿನಿಂದ ಇಂದಿನವರೆಗೆ ಮಳೆ ಮಾಯವಾಗಿದ್ದು ಮಳೆಗಾಲದಲ್ಲೂ ಬೇಸಿಗೆ ಅನುಭವವಾಗತೊಡಗಿದೆ. ಮಳೆಯಾಗದೆ ಇರುವುದು ರೈತ ಸಮುದಾಯದಲ್ಲಿ ಆತಂಕದ ವಾತಾವರಣ ಮೂಡಿಸಿದೆ. ಮಳೆಯಾಶ್ರಿತ ಪ್ರದೇಶದ ರೈತರು ಭೂಮಿ ಹದ ಮಾಡಿಕೊಂಡು ಬಿತ್ತನೆಗೆ ಸಜ್ಜಾಗಿ ಕುಳಿತಿದ್ದಾರೆ. ಆದರೆ ಪ್ರಸಕ್ತ ವರ್ಷ ಜುಲೈ ತಿಂಗಳ ಎರಡನೇ ವಾರ ಮುಗಿದರೂ ಮಳೆ ಸುರಿಯದ ಕಾರಣ ಈ ಭಾಗದ ಕೃಷಿಕ ಸಮುದಾಯ ಆತಂಕಕ್ಕೆ ಒಳಗಾಗಿದ್ದಾರೆ. ಕಳೆದ ವರ್ಷದ ಹಿಂಗಾರು ಹಾಗೂ ಮುಂಗಾರಿನಲ್ಲಿ ಸರಿಯಾಗಿ ಮಳೆಯಾಗದೇ ಇರುವುದರಿಂದ ಅಂತರ್ಜಲ ಮಟ್ಟವೂ ಸಂಪೂರ್ಣ ಕುಸಿದಿದೆ. ನದಿ ತೀರದಲ್ಲಿನ ಕಬ್ಬಿನ ಬೆಳೆ ಕಮರಿ ಹೋಗಿದೆ. ಮಳೆರಾಯ ಕಣ್ಮರೆಯಾಗಿದ್ದರಿಂದ ಮಳೆಯಾಶ್ರಿತ ಪ್ರದೇಶದ ರೈತರು ಕಂಗಾಲಾಗಿದ್ದು ದಿಕ್ಕು ತೋಚದೇ ವರುಣನ ಕೃಪೆಗಾಗಿ ಆಕಾಶದತ್ತ ಮುಖ ಮಾಡಿ ಕಾಯುತ್ತಿದ್ದಾರೆ.

Hosadigantha Pg.01

ರಾಜ್ಯದಲ್ಲೇ ಹೆಚ್ಚು ಬೇಡಿಕೆ | ರೈತರ ಮೊಗದಲ್ಲಿ ಮಂದಹಾಸ

ವೀಳ್ಯದೆಲೆಗೆ ಬಂಗಾರದ ಬೆಲೆ

♦ಮಲ್ಲಿಕಾರ್ಜುನ ತುಂಗಳ

ರಬಕವಿ-ಬನಹಟ್ಟಿ (ಬಾಗಲಕೋಟೆ): ರಬಕವಿ-ಬನಹಟ್ಟಿ ತಾಲೂಕಿನ ಜಗದಾಳ ಗ್ರಾಮ ಅಕ್ಷರಶಃ ವೀಳ್ಯದೆಲೆ ಗ್ರಾಮ. ನೂರಾರು ವರ್ಷಗಳಿಂದ ವೀಳ್ಯದೆಲೆಯನ್ನೇ ಜೀವಾಳವಾಗಿಸಿಕೊಂಡಿರುವ ಜಗದಾಳದಲ್ಲೀಗ ಸಡಗರ- ಸಂಭ್ರಮ ಝಗಮಗಿಸುತ್ತಿದೆ. ರೈತಾಪಿ ವರ್ಗವೇ ಹೆಚ್ಚಿರುವ ಈ ಊರಿನ ಬಹುತೇಕರ ಮೊಗದಲ್ಲಿ ಮಂದಹಾಸ ನಲಿದಾಡುತ್ತಿದೆ. ವೀಳ್ಯದೆಲೆ ಈಗ ಬಂಗಾರದಂತಾಗಿರುವುದು ಇದಕ್ಕೆಲ್ಲ ಕಾರಣ.

ದಿಗಂತ ವಿಶೇಷ

ವೀಳ್ಯದೆಲೆ ಒಂದು ಡಬ್ಬಿಗೆ ಬರೋಬ್ಬರಿ 6 ಸಾವಿರ ರೂ.ಗಳಿಗೆ ದಾಖಲೆಯ ಮಾರಾಟವಾಗುತ್ತಿದೆ. ಇದುವರೆಗೆ ಈ ಬೆಲೆ ತಲುಪಿರಲಿಲ್ಲ. ಹಲವು ದಶಕಗಳಿಂದ ವೀಳ್ಯದೆಲೆ ಮಾರಾಟ ಮಾಡುತ್ತಾ ಬಂದಿದ್ದರೂ 4 ಸಾವಿರ ರೂ.ಗಳಷ್ಟು ಒಂದು ಡಬ್ಬಿ (12 ಸಾವಿರ ವೀಳ್ಯದೆಲೆ)ಗೆ ಮಾರಾಟವಾಗಿರುವುದು ದಾಖಲೆಯಾಗಿತ್ತು. ಇದೀಗ ದಾಖಲೆ ಬೆಲೆ ತಲುಪಿರುವುದರಿಂದ ಖುಷಿಯಾಗಿದೆ ಎನ್ನುತ್ತಾರೆ, ವೀಳ್ಯದೆಲೆ ಬೆಳೆಗಾರ ಗಂಗಪ್ಪ ಉಳ್ಳಾಗಡ್ಡಿ. ಒಂದೇ ಗ್ರಾಮದಲ್ಲಿ ಸುಮಾರು 400ಕ್ಕೂ ಹೆಚ್ಚು ಎಕರೆ ಪ್ರದೇಶದಲ್ಲಿ ವೀಳ್ಯದೆಲೆ ಬೆಳೆಯುತ್ತಾರೆ. ➡9



ಗ್ರಾಮಸ್ಥರ ಸಹಕಾರ

ಇತರೆ ಯಾವುದೇ ಬೆಳೆಗಳಿರಲಿ ಬೆಳೆಯುತ್ತಾರೆ. ವಾಣಿಜ್ಯ ಬೆಳೆಯಾದ ಕಬ್ಬು ಹಾಗೂ ವೀಳ್ಯದೆಲೆಗೆ ಮೊದಲ ಪ್ರಾಶಸ್ತ್ಯ ನೀಡಿರುವ ಇಲ್ಲಿನ ರೈತರಿಗೆ ನೀರು ಹೆಚ್ಚಿನ ಪ್ರಮಾಣದಲ್ಲಿ ಬೇಕೇ ಬೇಕು. ವೀಳ್ಯದೆಲೆ ಬೆಳೆದ ರೈತನಿಗೆ ಸಹಕಾರಿಯಾಗುತ್ತಿರುವ ಗ್ರಾಮಸ್ಥರು ಪಕ್ಕದ ಜಮೀನಿನ ಕೊಳವೆ ಬಾವಿಯಿಂದ ವೀಳ್ಯದೆಲೆ ಬೆಳೆಗಾರನಿಗೆ ನೀರು ಪೂರೈಸುವ ಕಾರ್ಯ ಹಿಂದಿನಿಂದಲೂ ಬಂದಿದೆ. ಹೀಗಾಗಿ ಇಲ್ಲಿ ಬೆಳೆದ ವೀಳ್ಯದೆಲೆ ಎಷ್ಟೇ ನೀರಿನ ಅಭಾವವಿದ್ದರೂ ಸರಿದೂಗಿಸುವಲ್ಲಿ ಗ್ರಾಮಸ್ಥರು ಟೊಂಕ ಕಟ್ಟಿ ನಿಲ್ಲುತ್ತಿರುವದು ವಿಶೇಷ.

NABARD celebrates its 42nd Foundation Day

The Hindu Bureau
BENGALURU

National Bank for Agriculture and Rural Development celebrated its 42nd Foundation Day on Monday. E.V. Ramana Reddy, ACS & DC, Government of Karnataka in his keynote address acknowledged the critical role of NABARD in supporting and financing various infrastructure projects in Karnataka's rural areas, through its Rural Infrastructure Development Fund.

T. Ramesh, chief GM and State head of NABARD said in 2022-23 they extended refinance assistance of ₹24,603 crore to rural financial institutions.

The Hindu Pg.03

SamyukthaKarnataka Pg.07

20 ಗುಂಟೆಯಲ್ಲಿ 12.5 ಲಕ್ಷ ರೂ. ಆದಾಯ । ಹನಿ ನೀರಾವರಿ ಪದ್ಧತಿ ಅಳವಡಿಕೆ

ಟೊಮೇಟೊ ಬೆಳೆದ ರೈತನಿಗೆ ಬಂಪರ್

▪ ಸಂಜೀವ ಮುಷ್ಠಗಿ

ಉಳ್ಳಾಗಡ್ಡಿ-ಖಾನಾಪುರ(ಬೆಳಗಾವಿ): ಗ್ರಾಹಕರ ಕೈ ಸುಡುತ್ತಿರುವ ಟೊಮೇಟೊ ಬೆಲೆ ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲೂಕು ಹೆಬ್ಬಾಳ ಗ್ರಾಮದ ರೈತನ ಕೈ ಹಿಡಿದಿದೆ. ರೈತ ಮಹೇಶ ಹಿರೇಮಠ 20 ಗುಂಟೆ ಜಮೀನಿನಲ್ಲಿ ಬರೊಬ್ಬರಿ 12.5 ಲಕ್ಷ ರೂ. ಬಂಪರ್ ಆದಾಯ ಪಡೆದು ಬೀಗಿದ್ದಾರೆ.

ಕಳೆದ 4 ವರ್ಷಗಳಿಂದ ಟೊಮೇಟೊ ಬೆಳೆದರೂ ಸಿಕ್ಕ ಬೆಲೆ ಅಷ್ಟಕ್ಕಷ್ಟೆ. ಎಷ್ಟೇ ನಷ್ಟವಾದರೂ ಎದೆಗುಂದದ ರೈತ ಮಹೇಶ ಹಿರೇಮಠ ಈ ಬಾರಿಯೂ ಸುಮಾರು 20 ಗುಂಟೆ ಭೂಮಿಯಲ್ಲಿ ಮಾರ್ಚ್ ಮೊದಲ ವಾರ 3,700 ಟೊಮೇಟೊ ಸಸಿ ನಾಟಿ ಮಾಡಿದ್ದರು. ಹೊಲದಲ್ಲಿದ್ದ ಕೊಳವೆ ಬಾವಿಯ ಮೂಲಕ ಹನಿ ನೀರಾವರಿ ಪದ್ಧತಿ ಅಳವಡಿಸಿಕೊಂಡು ಬೆಳೆ ಬೆಳೆದಿದ್ದರು. ಸುಮಾರು 45 ದಿನಗಳ ನಂತರ ನಿರೀಕ್ಷೆಗೂ ಮಿರಿ ಇಳುವರಿ ತೆಗೆದಿದ್ದಾರೆ. ಇದಕ್ಕೆ ಬಂಗಾರದಂತಹ ಬೆಲೆ ಸಿಕ್ಕಿದೆ.



ಹೆಬ್ಬಾಳ ಗ್ರಾಮದ ರೈತ ಮಹೇಶ ಗು.ಹಿರೇಮಠ ಟೊಮೇಟೊ ಬೆಳೆಯೊಂದಿಗೆ.

ಆರಂಭದಲ್ಲೇ ಬಂಪರ್ ಬೆಲೆ

ಮೊದಲ ಕಟಾವಿನಲ್ಲಿ 20 ಕೆಜಿಗೆ 700 ರಿಂದ 800 ರೂ., ನಂತರ 1,700 ರೂ.ಗಳಿಂದ 1,880 ರೂ.ಗಳವರೆಗೆ ದರ ಸಿಕ್ಕಿದೆ. ಪ್ರತಿ ಕೆಜಿಗೆ 85 ರಿಂದ 90 ರೂ. ದರ ಸಿಗುತ್ತಿದೆ. ಇದುವರೆಗೆ 20.5 ಟನ್‌ಗಳಷ್ಟು ಇಳುವರಿ ಬಂದಿದ್ದು, ಸುಮಾರು 15 ದಿನಗಳಿಂದ 1 ತಿಂಗಳಾಂತ್ಯದವರೆಗೆ 2 ಟನ್ ಇಳುವರಿ ಬರುವ ಸಾಧ್ಯತೆ ಇದೆ. ಇದರಿಂದ ಸುಮಾರು 2 ಲಕ್ಷ ರೂ. ಲಾಭ ಬರುವ ನಿರೀಕ್ಷೆ ಇದೆ ಎನ್ನುತ್ತಾರೆ ರೈತ ಮಹೇಶ.

> ತರಕಾರಿ ಬೆಳೆಗೆ ಸೆಗಣಿ ಗೊಬ್ಬರ, ಅಗತ್ಯವಿದ್ದಾಗ ರಸಗೊಬ್ಬರಗಳ ಬಳಕೆ ಮಾಡಿದ್ದರಿಂದ ಒಳ್ಳೆಯ ಇಳುವರಿ ಬಂದು ಉತ್ತಮ ಬೆಲೆ ದೊರೆಯಲು ಸಾಧ್ಯವಾಗಿದೆ. ಮುಖ್ಯವಾಗಿ ಕೃಷಿ ತಜ್ಞರ ಸಲಹೆ ಕೈ ಹಿಡಿದಿದೆ.
>
> ▪ ಮಹೇಶ ಹಿರೇಮಠ, ಕೃಷಿಕ

ಯಶಸ್ಸಿನ ಗುಟ್ಟು

ಸುಮಾರು 4 ಎಕರೆ ಕೃಷಿ ಭೂಮಿಯಲ್ಲಿ ಕುಟುಂಬದ ಸದಸ್ಯರ ಸಹಕಾರದೊಂದಿಗೆ ಕೃಷಿ ಕಾಯಕದಲ್ಲಿ ತೊಡಗಿದ್ದು 2 ಎಕರೆ ಭೂಮಿಯಲ್ಲಿ ಕಬ್ಬು, 1 ಎಕರೆ ಭೂಮಿಯಲ್ಲಿ ಮೆಣಸಿನಕಾಯಿ, ಅರ್ಧ ಎಕರೆಯಲ್ಲೆ ಹಾಗಲಕಾಯಿ ಮತ್ತು ಟೊಮೇಟೊ ಬೆಳೆಯುವ ಯೋಜನೆ ಹಾಕಿದ್ದರು. ವಿಶೇಷವಾಗಿ ಟೊಮೇಟೊ ಬೆಳೆಗೆ ಸುಮಾರು 2 ಲಕ್ಷದವರೆಗೆ ಖರ್ಚು ಮಾಡಿದ್ದಾಗಿ ವಿವರಿಸುತ್ತಾರೆ ಮಹೇಶ.

ಬಿಎ ಪದವೀಧರರಾದ ಮಹೇಶ ಸದ್ಯ ಕೃಷಿಯತ್ತ ಹೆಚ್ಚು ಗಮನಹರಿಸಿದ್ದು, ಗೋಟೂರು ಗ್ರಾಮದ ಕೃಷಿ ಸಲಹೆಗಾರ ಸುರೇಶ ಆಸೋದೆ ನಿರಂತರ ಮಾರ್ಗದರ್ಶನ ಮಾಡಿದ್ದಾಗಿ ಹೇಳುತ್ತಾರೆ.

ಇನ್ನೂ 3 ತಿಂಗಳು ಟೊಮಾಟೊ ಧಾರಣೆಗೆ ಕಡಿವಾಣ ಅಸಾಧ್ಯ

• ಕೆ.ಎಸ್.ಗಣೇಶ್

ಕೋಲಾರ: ಕೇಂದ್ರ ಸರಕಾರ ಟೊಮಾಟೊ ದರವನ್ನು ಪ್ರತಿ ಕೆಜಿಗೆ 80 ರೂ. ನಿಗದಿಪಡಿಸಿ ಮಾರಾಟ ಮಾಡಲು ಪ್ರಯತ್ನಿಸುತ್ತಿದೆಯಾದರೂ, ಇನ್ನೂ ಒಂದೆರೆಡು ತಿಂಗಳು ಇದು ಕಷ್ಟಸಾಧ್ಯದ ಪ್ರಯತ್ನವಾಗಲಿದೆ ಎನ್ನುವುದು ಟೊಮಾಟೊ ತವರಾಗಿರುವ ಕೋಲಾರ ಮಾರುಕಟ್ಟೆವರದಿಗಳು ದೃಢಪಡಿಸುತ್ತಿವೆ.

ಜುಲೈ ಆರಂಭದಿಂದಲೇ ಟೊಮಾಟೊ ಧಾರಣೆ ಏರುಮುಖದಲ್ಲಿ ಸಾಗುತ್ತಿದ್ದು ಇದೇ ಪರಿಸ್ಥಿತಿ ಇನ್ನು ಕನಿಷ್ಠ ಒಂದು ತಿಂಗಳವರೆಗಾದರೂ ಇರುತ್ತದೆ. ಟೊಮಾಟೊ ಧಾರಣೆ ಸದ್ಯಕ್ಕೆ ಪ್ರತಿ ಕೆಜಿಗೆ ಕೋಲಾರದ ಮಾರುಕಟ್ಟೆಯಲ್ಲಿಯೇ 120 ರಿಂದ 140 ರೂ.ವರೆಗೂ ಇದೆ. ಇಷ್ಟು ಮೊತ್ತದಲ್ಲಿ ಖರೀದಿಸಿ ಅವುಗಳನ್ನು ದೇಶದ ಮೂಲೆ ಮೂಲೆಗೆ ರವಾನಿಸಿ 80 ರೂ. ಕೆಜಿ ದರದಲ್ಲಿ ಮಾರಾಟ ಮಾಡುವುದು ಅಸಾಧ್ಯ ಎಂದು ಟೊಮಾಟೊ ಮಾರುಕಟ್ಟೆವರ್ತಕರು ಅಭಿಪ್ರಾಯ ಪಡುತ್ತಿದ್ದಾರೆ.

ಇತ್ತೀಚೆಗೆ ಎನ್‌ಸಿಸಿಎಫ್ (ನ್ಯಾಷನಲ್ ಕೋಆಪರೇಟಿವ್ ಕನ್ಸೂಮರ್ ಫೆಡರೇಷನ್ ಆಫ್ ಇಂಡಿಯಾ ಲಿ.) ಕೋಲಾರ ಮಾರುಕಟ್ಟೆಯಿಂದ 642 ಬಾಕ್ಸ್ ಟೊಮಾಟೊವನ್ನು ಹರಾಜಿನ ಮೂಲಕ ಖರೀದಿಸಿದ್ದರು. ಪ್ರತಿ ಬಾಕ್ಸ್ 112 ರೂ.ಗಳಿಗೆ ಎನ್‌ಸಿಸಿಎಫ್ ಖರೀದಿಸಿದ ಟೊಮಾಟೊ ಸಾಗಾಟಕ್ಕೆ ಪ್ಯಾಕಿಂಗ್ ಮಾಡುವುದರೊಳಗಾಗಿ ಪ್ರತಿ ಕೆಜಿಗೆ 134 ರೂ.ಗಳಾಗಿರುತ್ತದೆ. ಇಷ್ಟು ದುಬಾರಿ ಮೊತ್ತದ ಟೊಮಾಟೊವನ್ನು ದೇಶದ ಮಹಾನಗರಗಳಿಗೆ ಸಾಗಾಟ ಮಾಡಿ ಪ್ರತಿ ಕೆಜಿಗೆ 40 ರಿಂದ 50 ರೂ.ನಷ್ಟ ಮಾಡಿಕೊಂಡು ಗ್ರಾಹಕರಿಗೆ ಕೇವಲ 80 ರೂ. ಕೆಜಿ ದರದಲ್ಲಿ ಮಾರಾಟ ಮಾಡುವುದು ಅಸಾಧ್ಯವೇ ಸರಿ ಎಂಬು ಮಾತುಗಳು ಕೇಳಿ ಬರುತ್ತಿದೆ.



> ಜುಲೈನಲ್ಲಿ 10.50 ಲಕ್ಷ ಕ್ವಿಂಟಾಲ್ ಆವಕವಾಗುವ ಜಾಗದಲ್ಲಿ ಕೇವಲ 10 ಸಾವಿರಕ್ಕಿಂತಲೂ ಕಡಿಮೆ ಕ್ವಿಂಟಾಲ್ ಟೊಮಾಟೊ ಕೋಲಾರ ಮಾರು ಕಟ್ಟೆಗೆ ಆವಕವಾಗುತ್ತಿದೆ. ಮಳೆ ಕಾರಣ ನಾಸಿಕ್ ಮಾರುಕಟ್ಟೆ ಆರಂಭವಾಗುವುದು ತಡವಾಗುತ್ತಿದೆ. ಬಿಳಿ ನೊಣ ಮತ್ತು ಎಲೆ ಮುದುರು ರೋಗದಿಂದ ಟೊಮಾಟೊ ಉತ್ಪನ್ನ ಕಡಿಮೆಯಾಗಿದ್ದು, ಇನ್ನೂ 2-3 ತಿಂಗಳು ಟೊಮಾಟೊ ಆವಕದಲ್ಲಿ ಸುಧಾರಣೆ ಕಾಣುವುದು ಕಷ್ಟ.
>
> • ವಿಜಯಲಕ್ಷ್ಮಿ, ಕಾರ್ಯದರ್ಶಿ, ಕೋಲಾರ ಎಪಿಎಂಸಿ ಮಾರುಕಟ್ಟೆ

ಕೋಲಾರ ಮಾರುಕಟ್ಟೆಯಲ್ಲಿ ಹರಾಜಾಗುತ್ತಿರುವ ಟೊಮಾಟೊಗೆ ದೇಶದ ಪ್ರಮುಖ ನಗರಗಳಲ್ಲಿ ಬೇಡಿಕೆ ಇದೆ. ಸದ್ಯಕ್ಕೆ ಕೋಲಾರದ ಮಾರುಕಟ್ಟೆ ಟೊಮಾಟೊ ಬಾಂಗ್ಲಾ, ಶ್ರೀಲಂಕಾ, ಪಾಕಿಸ್ತಾನ ಇತರೆ ರಾಷ್ಟ್ರಗಳಿಗೆ ಕಳುಹಿಸಲಾಗುತ್ತಿಲ್ಲ. ದೇಶೀಯ ಮಾರುಕಟ್ಟೆಯಲ್ಲೇ ಬೇಡಿಕೆ ವಿಪರೀತವಾಗಿರುವುದೇ ಇದಕ್ಕೆ ಕಾರಣ.

ಕೋಲಾರ ಮಾರುಕಟ್ಟೆಗೆ ಭಾನುವಾರ ಕೇವಲ 10,825 ಕ್ವಿಂಟಾಲ್ ಟೊಮಾಟೊ ಆವಕವಾಗಿತ್ತು. ಸೋಮವಾರ ಇದರ ಪ್ರಮಾಣ 9500 ಕ್ವಿಂಟಾಲ್‌ಗೆ ಕುಸಿದಿತ್ತು. 2022ರ ಜುಲೈ ತಿಂಗಳನಲ್ಲಿ ಕೋಲಾರ ಮಾರುಕಟ್ಟೆಗೆ 10.50 ಲಕ್ಷ ಕ್ವಿಂಟಾಲ್ ಟೊಮಾಟೊ ಆವಕವಾಗಿತ್ತು. 2021, 2019 ರ ಸಾಲಿನಲ್ಲಿ ಆವಕದ ಪ್ರಮಾಣ ಇದರ ಮೂರು ಪಟ್ಟು ಹೆಚ್ಚಾಗಿತ್ತು ಎಂಬುದನ್ನು ಗಮನಿಸಿದರೆ ಟೊಮಾಟೊಗೆ ಐತಿಹಾಸಿಕ ಧಾರಣೆ ಏಕೆ ಸಿಗುತ್ತಿದೆ ಎಂಬುದು ಅರಿವಾಗುತ್ತದೆ.

ಮಾರುಕಟ್ಟೆಯಲ್ಲಿ ಜುಲೈ 1 ರಿಂದ ಸಿಗುತ್ತಿರುವ ದುಬಾರಿ ಧಾರಣೆಯನ್ನು ಕಂಡು ಹಲವಾರು ರೈತರು ಮತ್ತೇ ಟೊಮಾಟೊ ಬೆಳೆಯಲು ತಮ್ಮ ತೋಟಗಳನ್ನು ಸಜ್ಜುಗೊಳಿಸುತ್ತಿದ್ದಾರೆ. ಈ ಬೆಳೆ ಬೆಳೆಯಲು ಸುಮಾರು 3 ತಿಂಗಳು ಬೇಕಾಗುತ್ತದೆ. ಈಗಾಗಲೇ ನಾಟಿಮಾಡಿರುವ ಬೆಳೆ 15-20 ದಿನಗಳ ನಂತರ ಆರಂಭವಾಗುತ್ತದೆ. ಈ ಕಾರಣದಿಂದ ಈಗ ಮಾರಾಟವಾಗುತ್ತಿರುವ ಟೊಮಾಟೊ ಧಾರಣೆ ಇನ್ನೂ ಒಂದೆರೆಡು ತಿಂಗಳು ಮುಂದುವರಿಯುತ್ತದೆಯೆಂದು ನಿರೀಕ್ಷಿಸಲಾಗುತ್ತಿದೆ.

ದೇಶದ ಮತ್ತೊಂದು ದೊಡ್ಡ ಟೊಮಾಟೊ ಮಾರುಕಟ್ಟೆ ಎಂದು ಗುರುತಿಸಲ್ಪಟ್ಟಿರುವ ಮಹಾರಾಷ್ಟ್ರದ ನಾಸಿಕ್ ಮಾರುಕಟ್ಟೆ ಸಾಮಾನ್ಯವಾಗಿ ಆಗಸ್ಟ್‌ನಲ್ಲಿ ಆರಂಭವಾಗುತ್ತಿತ್ತು. ಆದರೆ, ಈ ಬಾರಿ ಆ ಭಾಗದಲ್ಲಿ ಮಳೆ ಹೆಚ್ಚಾಗಿರುವುದರಿಂದ ನಾಸಿಕ್ ಮಾರುಕಟ್ಟೆ ಟೊಮಾಟೊ ವಹಿವಾಟು ನಡೆಸುವುದು ಅನುಮಾನ ಎನ್ನಲಾಗುತ್ತಿದೆ.

ಮುಂದಿನ ದಿನಗಳಲ್ಲಿಯೂ ಕೋಲಾರ ಜಿಲ್ಲೆಯಲ್ಲಿ ಒಣ ಹವೆಯೇ ಮುಂದುವರೆದು ಈಗ ನಾಟಿ ಮಾಡಿರುವ ಟೊಮಾಟೊ ಭರ್ಜರಿ ಫಸಲು ನೀಡಿದಾಗ ಮಾತ್ರವೇ ಧಾರಣೆ ನಿಯಂತ್ರಣಕ್ಕೆ ಬರಲು ಸಾಧ್ಯವಾಗುತ್ತದೆ. ಕೇವಲ ಶೇ.25 ರಷ್ಟು ರೈತರು ಮಾತ್ರವೇ ಟೊಮಾಟೊ ಬೆಳೆದು, ಈ ಪೈಕಿ ಶೇ.25 ರಿಂದ 30ರಷ್ಟು ಮಾತ್ರವೇ ಗುಣಮಟ್ಟದ ಫಸಲು ಸಿಗುವಂತಾದರೆ ಈಗಿರುವ ಪರಿಸ್ಥಿತಿಯೇ ಮುಂದಿನ ತಿಂಗಳಲ್ಲೂ ಮುಂದುವರಿಯುತ್ತದೆ.

Udayavani Pg.06

Hosadigantha Pg.12

ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ನಬಾರ್ಡ್ ಮಹತ್ವದ ಪಾತ್ರ




ಬೆಂಗಳೂರು: ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಧಿ ಮೂಲಕ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ, ವಿವಿಧ ಮೂಲಸೌಕರ್ಯ ಯೋಜನೆಗಳಿಗೆ ಬೆಂಬಲ ಮತ್ತು ಹಣಕಾಸು ಒದಗಿಸುವಲ್ಲಿ ನಬಾರ್ಡ್ ನಿರ್ಣಾಯಕ ಪಾತ್ರ ವಹಿಸುತ್ತಿದೆ ಎಂದು ಅಪರ ಮುಖ್ಯ ಕಾರ್ಯದರ್ಶಿ ಡಾ. ಈ.ವಿ.ರಮಣ ರೆಡ್ಡಿ ತಿಳಿಸಿದರು.

ನಗರದ ಕೆ.ಜಿ.ರಸ್ತೆಯ ನಬಾರ್ಡ್ ಸಭಾಂಗಣದಲ್ಲಿ ಸೋಮವಾರ ನಡೆದ, ನಬಾರ್ಡ್‌ನ 42ನೇ ಸಂಸ್ಥಾಪನಾ ದಿನಾಚಾರಣೆ ಮತ್ತು ರೈತ ಉತ್ಪಾದಕ ಸಂಸ್ಥೆಗಳಿಗೆ ಸನ್ಮಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಸರ್ಕಾರವು ರಾಜ್ಯದಲ್ಲಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳು ಜಾರಿಗೆ ತರಲು ನಬಾರ್ಡ್‌ನೊಂದಿಗೆ ನಿಕಟವಾಗಿ ಕೆಲಸ ಮಾಡುತ್ತಿದೆ. ನಬಾರ್ಡ್ ಮತ್ತು ಎಲ್ಲಾ ಪಾಲುದಾರರ ಬೆಂಬಲದೊಂದಿಗೆ ಮುಂಬರುವ ದಿನಗಳಲ್ಲಿ ಹವಾಮಾನ ವೈಪರೀತ್ಯ, ಗ್ರಾಮೀಣ – ನಗರ ವಲಸೆ ಮತ್ತು ಡಿಜಿಟಲ್ ಅಸಮಾನತೆಯಂತಹ ವಿಷಯಗಳತ್ತ ಗಮನ ನೀಡಿದರೆ, ಗ್ರಾಮೀಣ ಭಾರತ ಪರಿವರ್ತನೆಯ ಮೂಲಕ ಸಮೃದ್ಧ ಮತ್ತು ಸಮಾನತೆಯ ಭಾರತದ ಕನಸು ನನಸು ಮಾಡಬಹುದು ಎಂದರು.

ನರ್ಬಾಡ್‌ನ ಮುಖ್ಯ ಪ್ರಧಾನ ವ್ಯವಸ್ಥಾಪಕ ಮತ್ತು ರಾಜ್ಯ ಮುಖ್ಯಸ್ಥ ಟಿ.ರಮೇಶ್ ಮಾತನಾಡಿ, 1982 ರಲ್ಲಿ 4,519 ಕೋಟಿ ರೂ. ಗಳಿಷ್ಟಿದ್ದ ಆಯವ್ಯಯ ಗಾತ್ರವು ಈಗ 8 ಲಕ್ಷ ಕೋಟಿ ರೂ.ಗಳ ಬೆಳವಣಿಗೆಯನ್ನು ದಾಖಲಿಸಿದೆ. ದೇಶದ ಕೃಷಿ ಮತ್ತು ಗ್ರಾಮೀಣ ಕ್ಷೇತ್ರಗಳ ಸಮೃದ್ಧಿ ತರುವ ಹೂಡಿಕೆ ಸಾಲಕ್ಕೆ ನೀಡಲಾಗಿದೆ ಎಂದು ತಿಳಿಸಿದರು. ರೈತರಿಗೆ ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲು, ಕೃಷಿ ಉತ್ಪಾದಕತೆಯನ್ನು ಹೆಚ್ಚಿಸಲು, ಗ್ರಾಮೀಣ ಆದಾಯವನ್ನು ವೈವಿಧ್ಯಗೊಳಿಸಲು ಮತ್ತು ಸುಸ್ಥಿರ ಜೀವನೋಪಾಯವನ್ನು ಉತ್ತೇಜಿಸಿಲು ರೈತರಿಗೆ ನಬಾರ್ಡ್ ಸಹಕಾರಿಯಾಗಿದೆ ಎಂದರು.

Times Of India Pg.04



ಉದಯವಾಣಿ

ಮಂಗಳವಾರ, ಜುಲೈ 18, 2023

ನಾಳೆ ರೈತರಿಗಾಗಿ ಆನ್‌ಲೈನ್ ತರಬೇತಿ

ಬೆಂಗಳೂರು: ಕೃಷಿ ಇಲಾಖೆ ಮತ್ತು ಕೃಷಿ ವಿಶ್ವವಿದ್ಯಾನಿಲಯದ ಸಹಯೋಗದಲ್ಲಿ ತೊಗರಿ ಸೊರಗು ರೋಗದ ಸಮಗ್ರ ನಿರ್ವಹಣೆ ಕುರಿತು ರಾಜ್ಯ ಮಟ್ಟದ ಆನ್‌ಲೈನ್ ತರಬೇತಿ ಕಾರ್ಯಾಗಾರ ಜು.19ರ ಬೆಳಗ್ಗೆ 10.30ರಿಂದ 12.30ರ ವರೆಗೆ ಹಮ್ಮಿಕೊಳ್ಳಲಾಗಿದೆ.ರಾಜ್ಯದಲ್ಲಿ16.64 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ತೊಗರಿಯನ್ನು ಪ್ರಮುಖವಾಗಿ ಕಲಬುರಗಿ, ವಿಜಯಪುರ, ಯಾದಗಿರಿ, ರಾಯಚೂರು, ಬೀದರ್, ಬೆಂಗಳೂರು (ಗ್ರಾಮಾಂತರ) ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಅತ್ಯಧಿಕ ಪ್ರಮಾಣದಲ್ಲಿ ತೊಗರಿ ಬೆಳೆ ಬೆಳೆಯಲಾಗುತ್ತಿದೆ. ಕಳೆದ ಸಾಲಿನಲ್ಲಿ ಸೊರಗು ರೋಗದಿಂದ ಸುಮಾರು 300 ಕೋಟಿ ರೂ. ನಷ್ಟ ಉಂಟಾಗಿದೆ. ಈ ಹಿನ್ನೆಲೆಯಲ್ಲಿ ತೊಗರಿ ಬೆಳೆ ಸಂರಕ್ಷಣೆಗೆ ಅಗತ್ಯವಿರುವ ಕ್ರಮಗಳ ಬಗ್ಗೆ ರೈತರಿಗೆ ತಿಳಿಸಲು ಆನ್‌ಲೈನ್ ಕಾರ್ಯಕ್ರಮ ಹಮ್ಮಿಕೊಂಡಿದೆ. ಒಂದೇ ಸಲ 3 ಸಾವಿರ ತೊಗರಿ ಬೆಳೆಗಾರರು ಮತ್ತು ವಿಸ್ತರಣಾ ಕಾರ್ಯಕರ್ತರು ಭಾಗವಹಿಸಬಹುದು. ಆನ್‌ಲೈನ್ ತರಬೇತಿಗೆ ಲಿಂಕ್ https://zoom.us/j/92953255829?pwd=TUV0VGZyTWJZMTdUSG5DNU1ScTQ1UT09 ಮತ್ತು ಪಾಸ್ ಕೋಡ್ 123123.ಹೆಚ್ಚಿನ ಮಾಹಿತಿಗೆ ಕೃಷಿ ಇಲಾಖೆಯ ಸಿಬ್ಬಂದಿ ಅಥವಾ ದೂರವಾಣಿ ಸಂಖ್ಯೆ 9481425522, 9591212871, 99646 89340ಗೆ ಸಂಪರ್ಕಿಸಬಹುದು.